8)	ಕಡೂರು	4.00
9)	ತಿಪಟೂರು	4.00
10)	ಮಳವಳ್ಳಿ	5.00
11)	ಆಳಂದ	4.00
12)	ಶಹಾಪುರ	4.00
13)	ಸೇಡಂ	4.00
14)	ಸಕಲೇಶಪುರ	4.00
15)	ಕಾರ್ಕಳ	5.00
16)	ಹಾನಗಲ್	3.00
17)	ಆನೇಕಲ್	3.00
18)	ಶ್ರೀರಂಗಪಟ್ಟಣ	3.00
19)	ಹಾವೇರಿ	5.00
20)	ಚಿತ್ತಾಪುರ	2.50
21)	ಕೆಂಗೇರಿ	4.83
22)	ಯಲಹಂಕ	9.00

ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಉತ್ತೇಜನ

1551 - ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಗ್ರಾಮಾಂತರ ಪ್ರದೇಶದಲ್ಲಿ ಸ್ಥಾಪಿಸಲ್ಪಡುವ ಸಣ್ಣ ಕೈಗಾರಿಕೆಗಳಿಗೆ ಸರ್ಕಾರವು ನೀಡುವ ಸಾಲದ ಹಣ, ವಿವಿಧ ಸಂಸ್ಥೆಗಳಿಂದ ನಿಗಮದಿಂದ ಸಹಾಯ ಸಬ್ಸಿಡಿ, ರಿಯಾಯಿತಿ ಹಾಗೂ ಉತ್ತೇಜನಗಳು ಯಾವುವು? (ಸಂಪೂರ್ಣ ವಿವರ ನೀಡುವುದು)

ಶ್ರೀ ಬಿ. ಎ. ಮೋಹಿದ್ದೀನ್ (ಸಣ್ಣ ಪ್ರಮಾಣದ ಕೈಗಾರಿಕ ಸಚಿವರು) :

1) ಗ್ರಾಮಾಂತರ ಪ್ರದೇಶದಲ್ಲಿ ಸ್ಥಾಪಿಸಲ್ಪಡುವ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ಹಾಗೂ ಉತ್ತೇಜನಗಳನ್ನು ಸಬ್ಸಿಡಿ ರೂಪದಲ್ಲಿ ನೀಡಲಾಗುತ್ತದೆ. ಹಾಗೂ, ಕೈಗಾರಿಕಾ ಘಟನೆಗಳಿಗೆ ಮಾರಾಟ ಕರ ರಿಯಾಯಿತಿ, ಮುಂದೂಡಿಕೆ ಸೌಲಭ್ಯ ಮತ್ತು ಮುದ್ರಾಂಕ ಶುಲ್ಕ ವಿನಾಯಿತಿ ಸೌಲಭ್ಯಗಳನ್ನೂ ಸಹ ನೀಡಲಾಗುತ್ತಿದೆ. ಈ ವಿಷಯದಲ್ಲಿ ಸರ್ಕಾರದ ಹೊಸ ಕೈಗಾರಿಕಾ ನೀತಿ 1996-2001ರಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಬರುವಂತಹ ಕೈಗಾರಿಕಾ ಘಟಕಗಳಿಗೆ ಮೇಲ್ಕಂಡ ಪ್ರೋತ್ಸಾಹ, ಉತ್ತೇಜನ

ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತಿದೆ. ಸರ್ಕಾರದಿಂದ ಈ ಘಟಕಗಳಿಗೆ ಸಾಲ ನೀಡುವ ಯಾವ ಯೋಜನೆಯೂ ಜಾರಿಯಲ್ಲಿರುವುದಿಲ್ಲ.

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ

1552 - ಶ್ರೀ ಹೆ. ಎಚ್. ಸಿ. ಬಾಲಕೃಷ್ಣ (ಮಾಗಡಿ) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1995-96 ಹಾಗೂ 1996-97ನೇ ಸಾಲಿನಲ್ಲಿ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಮಂಜೂರಾದ ಒಟ್ಟು ಹಣವೆಷ್ಟು? (ಇದರಲ್ಲಿ ಕೇಂದ್ರ ಮತ್ತು ರಾಜ್ಯದ ಪಾಲು ಎಷ್ಟ?)*

ಆ) *ಈ ನಿಗಮದಿಂದ ವಿವಿಧ ಯೋಜನೆಯಡಿ ತಾಲ್ಲೂಕುವಾರು ಬಳಸಿದ ಹಣದ ವಿವರ ನೀಡುವುದು? (ಯೋಜನೆಯ ಸಹಿತ)*

ಇ) *ಈ ನಿಗಮದ ಸಂಪೂರ್ಣ ಉಪಯೋಗ ಫಲಾನುಭವಿಗಳಿಗೆ ದೊರೆತಿದೆಯೇ?*

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳಿಗೆ 1995-96 ಹಾಗೂ 1996-97ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಹಣದ ವಿವರ ಈ ಕೆಳಗಿನಂತಿದೆ :

ನಿಗಮ	1995-96	1996-97 (ರೂ.ಲಕ್ಷಗಳಲ್ಲಿ)
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ	438.00	469.00
ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ	683.00	1178.00

ಕೇಂದ್ರ ಸರ್ಕಾರದಿಂದ ಯಾವುದೇ ಆದ ಹಣ ಮಂಜೂರು ಮಾಡಿರುವುದಿಲ್ಲ.

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಹೌದು